ಹಸಿರು ಅಂಗಳಗಳು! ಹಸಿರ ಸಿರಿ ಮುರಿದು ಬಿದ್ದರೆ ಈ ಹಿರಿ ಹಿತ್ತಲಿನಲ್ಲಿ! ಅಷ್ಟೊಂದು ಮಾವು–ಹಲಸು ಮರಗಳ ಗುಂಪುಗಳನ್ನಂತು ಆಕೆ ಎಂದೂ ಕಂಡದ್ದೇ ಇಲ್ಲ. ಒಂದು ಮಧ್ಯಾಹ್ನ ಎಲ್ಲರ ಕಣ್ಣು ತಪ್ಪಿಸಿ, ಮನೆಯ ವಿಶಾಲ ಹಿತ್ತಲಿಗೆ ಒಬ್ಬಳೇ ಹೋದಳು. ತೃಪ್ತಿಯಾಗಿ ಓಡಾಡಿದಳು. ಮರಗಿಡ ಬಳ್ಳಿಗಳನ್ನು ಮುಟ್ಟಿ ನೋಡಿ ಆನಂದಿಸಿದಳು. ಒಬ್ಬಳೇ ಮರ ಏರಿ ಕೂತು ಕೊಳ್ಳುವುದಂತು ಅವಳಿಗೆ ತೀರಾ ಪ್ರಿಯವಾದ ವಿಚಾರ. ಎಲೆಗೊಂದು ಕಾಯಿ ಕಚ್ಚಿದ್ದ ಮಾವಿನ ಮರವೊಂದನ್ನು ಸರಸರನೆ ಏರಿ ಕೂತೇಬಿಟ್ಟಳು. ಮಿಡಿಗಾಯಿ ಕಿತ್ತು–ತಿನ್ನತೊಡಗಿದಳು.

ಸ್ವಲ್ಪ ದೂರದಲ್ಲಿ ಇನ್ನೊಂದು ಮರ ಏರಿ ಕೂತ ಶಾಮ ಶ್ರೀಧರ ಇಬ್ಬರಿಗೂ ರತ್ನ ಮರದಲ್ಲಿ ಅವಿತು ಕೂತು ಮಾವಿನಕಾಯಿ ತಿನ್ನುತ್ತಿದ್ದುದು ಕಂಡೇ ಕಂಡಿತು. ಕೂಡಲೇ ಕೆಳಕ್ಕೆ ಧುಮುಕಿದರು. ಇವರಿಬ್ಬರೂ ಸುಬ್ಬಪ್ಪನವರ ಹಿರಿಯ ಮಕ್ಕಳು. ಮುಂದೆ ಮದುವೆಯಾಗಲಿರುವ ಸರಸಿಯ ಅಣ್ಣಂದಿರು.

ಇಬ್ಬರೂ ರತ್ನ ಕೂತಿದ್ದ ಮರದ ಕೆಳಗೆ ಬಂದವರೇ, 'ಇಳಿಯೇ ಕೆಳಗೆ...' ಗರ್ಜಿಸಿದರು. ಅವರುಗಳ ಬಿರುಗಣ್ಣುಗಳಿಗೇ ಹೆದರಿಬಿಟ್ಟಳು ರತ್ನಾ. 'ಇಳೀತೀನಿ ಇಳೀತೀನಿ ನೀವಿದ್ರೂ ದೂರ ಹೋಗಿ' ಅನ್ನುತ್ತಾ ಅಂಜುತ್ತಲೇ ಮೆಲ್ಲಗೆ ಧುಮುಕಿದಳು.

ಒಡನೆ ಆಕ್ರಮಣ ಮಾಡಿದರು ಇಬ್ಬರೂ. 'ನಮ್ಮನೆ ಮಾವಿನಕಾಯಿ ಕದೀತೀಯೇನೇ...'

'ಶ್ರೀಧರ... ಇವಳು ನಮಗೆ ಅಮ್ಮನಂತೆ ಕಣೋ...'

'ಅಮ್ಮನಂತೆ ಅಮ್ಮ... ಗುಮ್ಮ! ಅಣ್ಣ, ನಾಲ್ಕು ಬಾರಿಸೋ ಅವಳಿಗೆ.'

ಬಿಟ್ಟಾನೆಯೇ ಶಾಮ? ಹಿಂದೆ ಮುಂದೆ ನೋಡದೆ ಆಕ್ರೋಶದಿಂದ ಗುದ್ದತೊಡಗಿದ. ಶ್ರೀಧರನೂ ಯಥಾಶಕ್ತಿ ಕೈಗೂಡಿಸಿದ.

ರತ್ನಾ ಬಿಕ್ಕಿ ಬಿಕ್ಕಿ ಅತ್ತಳು. 'ಬಿಡ್ರೋ... ಬಿಡ್ರೋ ನನ್ನ... ತಾಳಿ, ನನ್ನ ಅಪ್ಪಯ್ಯಂಗೆ ಹೇಳಿ ಮಾಡಿಸ್ತೀನಿ.'

ಅವರೇನೂ ಬೆದರಲಿಲ್ಲ. ಮತ್ತಷ್ಟು ದಬ ದಬ ಗುದ್ದು ಹಾಕಿದರು. ವಯಸ್ಸಿನಲ್ಲಿ ತನಗಿಂತ ಹಿರಿಯರಾದ ತನ್ನಿಬ್ಬರು ಪುತ್ರ ರತ್ನರಿಂದಲೇ ಒಂದಾನೊಂದು ದಿನ ತಾನು ಏಟು ತಿನ್ನಬಹುದೆಂದು ರತ್ನಾ ಕನಸಿನಲ್ಲಿಯೂ ಎಣಿಸಿರಲಿಲ್ಲ.

ಬಿಡಿಸಿಕೊಳ್ಳಲು ಕೊಸರಾಡುತ್ತಿರುವಾಗಲೇ, ಯಾತಕ್ಕೋ ಅಲ್ಲಿಗೆ ಬಂದ ಸುಬ್ಬಪ್ಪ ಇದನ್ನು ಕಂಡರು. ಹತ್ತಿರ ಧಾವಿಸಿದವರೇ ಹೆಂಡತಿಯನ್ನು ಮಕ್ಕಳ ಪೆಟ್ಟುಗಳಿಂದ ಪಾರು ಮಾಡಿದರು. ಅವರಿಬ್ಬರೂ ಅವಳನ್ನು ಅಣಗಿಸಿ ಓಡಿ ಹೋದರು.

ರತ್ನಾ ಬಿಕ್ಕಿ ಬಿಕ್ಕಿ ಅಳುತ್ತಲೇ ಇದ್ದಳು. ಅವಳ ಎಳೆಮೊಗ ಕೆಂಪೇರಿತ್ತು. ನೋವಿಗಿಂತ ಹೆಚ್ಚಾಗಿ ಅವಮಾನದ ಬಾಧೆ ಅವಳಿಗೆ. 'ಅಳಬೇಡ ಇನ್ನೆಂದೂ ಹೀಗಾಗಲ್ಲ. ಆ ಹುಡುಗರಿಗೆ ನಾನು ಬುದ್ಧಿ ಹೇಳ್ತೀನಿ. ಎಷ್ಟಂದರೂ ನೀನು ಅವರ ಅಮ್ಮ... ಈ ಮನೆ ಯಜಮಾನಿ...' ಗಂಡರಾಯ ಎಷ್ಟೇ ರಮಿನಿಸಿದರೂ, ರತ್ನಳ ಅಳು ನಿಂತಿರಲಿಲ್ಲ. ಮೆಲ್ಲಗೆ ಆಚೀಚೆ ನೋಡಿ ಹೊಸ ಹೆಂಡತಿಯನ್ನು ಎತ್ತಿಕೊಂಡೇ ಬಿಟ್ಟರು. 'ನಿಂಗೆ ಅಂತ ಸಂತೆಯಿಂದ ಬಣ್ಣ ಬಣ್ಣದ ರಿಬ್ಬನ್ ತಂದಿಟ್ಟಿದೀನಿ... ಕೋಣೇಲಿದೆ... ಆಮೇಲೆ ಕೊಡ್ತೀನಿ.'

ರಿಬ್ಬನ್ ಅಂದ ಕೂಡಲೇ ರತ್ನಳ ಮೊಗ ಊರಗಲವಾಯ್ತು. ಅವಳ ನಗುವನ್ನು ಕಂಡು ಮಾನ್ಯ ಸುಬ್ಬಪ್ಪನೋರೂ ಸಂತುಷ್ಟರಾದರು. ಮೆಲ್ಲಗೆ ಬಾಗಿ ಅವಳ ಚಿಗುರುಹಣೆಗೆ ಒಂದು ಹೂಮುತ್ತನ್ನೊತ್ತ ಬೇಕೆನ್ನುವಾಗಲೇ... ಥೇಟು ಸಿನಿಮಾ ಶೈಲಿಯಲ್ಲೇ ಚುಂಬನ ಭಗ್ನ ಸಂಭವಿಸಿತು.

'ಕಂದ, ಎಲ್ಲಿ ಹೋದ್ಯೇ...' ನಾಗಮ್ಮನ ಕೂಗು ಹಿತ್ತಲ ಬೇಲಿಯಿಂದಾಚೆ ತೂರಿ ಬಂತು. ಎಳೆಗರುವನ್ನು ಹುಡುಕಿ ಬರುವ ಹಸುವಿನ 'ಅಂಬಾ'ದಂತೆಯೇ ಇತ್ತು ಆ ಕೂಗು. ಸುಬ್ಬಪ್ಪ ಗಾಬರಿಯಿಂದ ರತ್ನಳನ್ನು ಇಳಿಸಿಬಿಟ್ಟರು. 'ಏನೋ ಮಂಜಾ... ಕರುದ್ಯೇನೋ ನನ್ನ?' ಅನ್ನುತ್ತಾ ಶರವೇಗದಲ್ಲಿ ಕಣ್ಮರೆಯಾದರು.

* * *

ಅಂತೂ ಸುಬ್ಬಪ್ಪನೋರಿಗೆ ಎರಡನೇ ಬಾರಿ ಕಂಕಣಭಾಗ್ಯವೊದಗಿದ ಬೆನ್ನಲ್ಲೇ ಮಗಳಿಗೆ ಧಾರೆಯೆರೆಯುವ ಸುಯೋಗವೂ ಬಂದಾಯ್ತು. ಅದಂತೂ ಇನ್ನೂ ಅದ್ದೂರಿ!

'ಸುಬ್ಬಪ್ಪ ಸಾಹುಕಾರ್ರು ಅದೆಷ್ಟು ಡೌಲಾಗಿ ತಮ್ಮ ಒಬ್ಬಳೇ ಹೆಣ್ಣುಮಗಳ ಮದುವೇನ ಉಡಾಯಿಸಿಬಿಟ್ಟರು!' ಅನ್ನುವಂಥ ಕೀರ್ತಿ ಆ ಚಂದ್ರಾರ್ಕವಾಗಿ ನಿಲ್ಲುವುದು ಬೇಡವೇ?

ಶ್ರೀಮಂತಿಕೆಯನ್ನೆಲ್ಲ ಮೆರೆಸಿಬಿಟ್ಟರು ಸುಬ್ಬಪ್ಪ. ಪಾಯಸ ಪರಮಾನ್ನಗಳಿಂದ ಮೂರು ದಿನಗಳ ಕಾಲ ಊರಜನ ತಣಿದುಹೋದರು.

ಇತ್ತ ರತ್ನಳ ಯಜಮಾನಿಕೆಯೂ ದೊಡ್ಡದೇ. ಅನಿರೀಕ್ಷಿತವಾಗೊಂದು ಪ್ರಮುಖಸ್ಥಾನವೊದಗಿ, ಎಲ್ಲರೂ ಎತ್ತರಕ್ಕೇರಿಸುವಾಗ ಉಬ್ಬಿಹೋದಳು ಹುಡುಗಿ! ಬಂಗಾರದ ಕುಸುರಿಯಿಂದ ಭಾರೀ ಸೀರೆಯುಟ್ಟು ಝಗಮಗ ಆಭರಣ ಧರಿಸಿ ಗಂಡನ ಪಕ್ಕವೇ ನಿಂತ ರತ್ನಾ ತನಗಿಂತ ಆರು ತಿಂಗಳು ದೊಡ್ಡವಳಾದ ಮಗಳು ಸರಸಿಯನ್ನು ಅಳಿಯನಿಗೆ ಧಾರೆಯೆರೆದು ಕೊಟ್ಟಳು. ಸುಬ್ಬಪ್ಪನೋರಿಗೂ ಕೃತಕೃತ್ಯತೆ.

ಹೆಣ್ಣೊಪ್ಪಿಸಿದ ಶಾಸ್ತ್ರವೂ ಆಯ್ತು. ವರನ ಮನೆಯಲ್ಲಿ ನಡೆಯುವ ಮನೆತುಂಬಿಸೋ ಶಾಸ್ತ್ರಕ್ಕೆ ವಧುವಿನ ತಾಯಿ ಹೋಗಬೇಕು. ಅದಕ್ಕಾಗೇ ಬಂದಿದ್ದವಳಲ್ಲವೇ ರತ್ನಾ? ನಗುನಗುತ್ತಾ ಬಂಡಿಯೇರಿ ಹೊರಟಳು.

ಸರಸಿಯ ಗಂಡನ ಮನೆಯವರು ಬೀಗರಿಗೆ ಸೊಗಸಾದ ಬಿಡಾರದ ಮನೆಯನ್ನೇ ಸಜ್ಜುಗೊಳಿಸಿದ್ದರು. ರತ್ನಳ ಕಣ್ಣು ತಂಪಾಗುವಂತೆ, ಇಲ್ಲಿಯೂ ಎಲ್ಲೆಲ್ಲೂ ಹೂವು ಹಸಿರು. ಸರಸಿಯಂತು ಅರೆಗಳಿಗೆ ರತ್ನಳ ಜತೆಯನ್ನು ಬಿಟ್ಟದ್ದಿಲ್ಲ. ಬೇಕಾದಷ್ಟು ಕುಣಿದರು... ನಲಿದಾಡಿದರು. ನದಿಯ ಬಳಿಗೂ ಹೋಗಿ ಬಂದರು. ಮೆಟ್ಟಿಲ ಮೇಲೆ ಕೂತು ನೀರಲ್ಲಿ ಕಾಲು ತೋಯಿಸಿಕೊಂಡು ಪುಳಕಿತರಾದರು.

ರಾತ್ರಿಯ ಊಟವಂತು ತೀರಾ ಗಡದ್ದು. ಆ ಮೇಲೆ ಬೀಗರಿಗಾಗಿ ಕೋಣೆಗಳಲ್ಲಿ ಹಾಸಿಗೆಗಳು ಸಿದ್ಧವಾದವು. ಇಲ್ಲಿಯೂ ಸರಸಿ ರತ್ನಳನ್ನು ಬಿಡಲಿಲ್ಲ. 'ನಾನು–ನೀನು ಒಟ್ಟಿಗೆ! ಬಾ...' ಅಂತ ಕೈಹಿಡಿದು ತನ್ನ ಹಾಸಿಗೆಯಲ್ಲೇ ಮಲಗಿಸಿಕೊಂಡಳು. ಅವರಿಬ್ಬರ ಹರಟೆಯೇ... ಹರಟೆ!... ನಗೆಯೇ ನಗೆ! ಅಡಿಗೆ ಸೀನನ ಉಬ್ಬುಹಲ್ಲು... ವೆಂಕಜ್ಜಿ ಚೊಂಬು ಕದ್ದು ಸಿಕ್ಕಿ ಹಾಕಿಕೊಂಡದ್ದು, ಇವೆಲ್ಲ ಅವರ ಹರಟೆಗೆ ಗ್ರಾಸವಾದವು. ಮಧ್ಯರಾತ್ರಿಯವರೆಗೂ ಅವರ ಗುಸುಗುಸು ಮುಗಿಯದಿದ್ದಾಗ, ನಾಗಮ್ಮನೇ ಗದರಬೇಕಾಯ್ತು. 'ಇನ್ನು ಮಲಗಿ ಮಕ್ಕಳೇ... ಬೆಳಿಗ್ಗೆ ಬೇಗ ಏಳಬೇಕು... ಬೇಕಾದಷ್ಟು ಶಾಸ್ತ್ರ ಇದೆ...'

ಕಿಸಿಕಿಸಿ ನಗುತ್ತಾ ಮುಸುಕಿಕ್ಕಿದವು ಮಕ್ಕಳು.

* * *

ಬೆಳಗಾಯಿತು. ಕಿಟಕಿಯಿಂದ ಬೆಳ್ಳಿಕೋಲುಗಳು ತೂರಿ ಬಂದರೂ, ರತ್ನಾ–ಸರಸಿ ಇನ್ನೂ ಎದ್ದಿರಲಿಲ್ಲ. ಸರಸಿಯ ಸೋದರತ್ತೆ ಪಾರ್ವತಿ, ಆತುರಾತುರವಾಗಿ ಕೋಣೆಗೆ ಬಂದಳು. ಅವಳ ಜತೆ ವರನ ಕಡೆಯ ಕೆಲವು ಹೆಂಗಸರೂ ಇದ್ದರು.

'ಏಳ್ರೇ ಬೇಗ... ಹೊತ್ತಾಯ್ತು' ಪಾರ್ವತಿ ಅವರಿಬ್ಬರ ಹೊದಿಕೆ ಕಿತ್ತೆಳೆದಳು.

ನೋಡ್ತಾಳೆ... ಹಾಸಿಗೆ ಪೂರಾ ಒದ್ದೆ! ಅವರಿಬ್ಬರ ಸೀರೆಗಳೂ ಒದ್ದೆ ಮುದ್ದೆ!

ಪಾರ್ವತಿ ರತ್ನಳನ್ನೇ ದುರುಗುಟ್ಟಿ ನೋಡಿದಳು.

'ಯಾಕೇ ರತ್ನ ಉಚ್ಚೆ ಹುಯ್ಕೊಂಡು ಬಿಟ್ಟಿದ್ದೀ? ಪರಸ್ಥಳ ಅಂತ ಭಯ ಆಯ್ತೇನೇ?' ಅಂದಳು.

ರತ್ನ ಆ್ಹ ಊ್ಹ ಅನ್ನಲಿಲ್ಲ. ಆಗಷ್ಟೇ ಆಕಳಿಸುತ್ತಾ ಎದ್ದ ಸರಸಿ, ಸುತ್ತಮುತ್ತ ನೋಡಿ ಪಿಳಿ ಪಿಳಿ ಕಣ್ಣು ಬಿಟ್ಟಳು.

'ಬಾರೇ ಸರಸೀ, ಸ್ನಾನ ಮಾಡುಸ್ತೀನಿ... ಇವಳಿಂದ ಎಲ್ಲ ಪ್ರಾರಬ್ಧ...' ಪಾರ್ವತಿ ಮತ್ತೆ ರತ್ನಳನ್ನು ಗದರಿದಾಗ 'ಹೋಗ್ಲಿ ಬಿಡಿ ಪಾಪ... ಚಿಕ್ಕ ಹುಡುಗಿ...' ಸರಸಿಯ ಗಂಡನ ಮನೆ ಕಡೆಯವರೇ ಸಮಾಧಾನ ಮಾಡಿದರು.

ಪಾರ್ವತಿ ಸರಸರನೆ ಸರಸಿಯನ್ನೆಬ್ಬಿಸಿಕೊಂಡು ಹೊರಟುಬಿಟ್ಟಳು. ಉಳಿದವರು ಹಿಂಬಾಲಿಸಿದರು.

ಎಲ್ಲರೂ ಹೋದ ಮೇಲೆ ಅಮ್ಮನ್ನು ತಬ್ಬಿ ಬಿಕ್ಕಿದಳು ರತ್ನಾ. 'ನಾನಲ್ಲ ಅಮ್ಮ ಉಚ್ಚೆ ಮಾಡಿದ್ದು... ಅವಳೇ ಸರಸಿ' ಎಂದಳು.

'ಮತ್ತ್ಯಾಕೇ ಸುಮ್ಮನಿದ್ದೆ?' ನಾಗಮ್ಮ ಸಂಕಟದಿಂದ ಗದರಿದಳು' 'ಪಾಪ, ಮದ್ವೆ ಹೆಣ್ಣು... ಮಾನ ಕಳೀಬಾರ್ದು ಅಂತ ಒಪ್ಕೊಂಡುಬಿಟ್ಟೆ.

'ಅಯ್ಯೋ ಕಂದ' ಮುತ್ತಿಕ್ಕಿದಳು ನಾಗಮ್ಮ. ನಿಟ್ಟುಸಿರಿಟ್ಟಳು.

'ಸರಿ ಬಾ, ನೀನ್ಯಾಕೆ ನಿನ್ನ ಮಗಳ ಉಚ್ಚೇನ ನಿನ್ನ ಸೀರೇಲಿ ಕಟ್ಟಿಕೊಂಡು ಕೂತಿರ್ತೀ? ಸ್ನಾನ ಮಾಡಿಸ್ತೀನಿ ನಡಿ...' ತೊಪ್ಪೆಯಾಗಿದ್ದ ಜರತಾರಿ ಸೀರೆಯನ್ನು ಮೇಲೆತ್ತಿ ಮುದುರಿ ಹಿಡಿದು ಹೆಜ್ಜೆ ಮೇಲೆ ಹೆಜ್ಜೆ ಹಾಕುತ್ತಾ ಬಚ್ಚಲಿಗೆ ನಡೆದಳು ಸರಸಿಯ ಚಿಕ್ಕಮ್ಮ.

